**<u>ಸಾಕ್ಷಿಯನ್ನು ದಿಃ30.7.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>**

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ</u>**

ನಿಪಿ 28 ರಿಂದ 33 ರ ದಾಖಲೆಗಳು ಕಾರಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸಾಕ್ಷಿಯು ಸ್ವಾಮೀಜಿ ರವರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ನಿಪಿ28 ರಿಂದ 33 ರ ದಾಖಲಾತಿಗಳನ್ನು ಯಾವ ಉದ್ದೇಶಕೋಸ್ಕರ ಹಾಕಿದ್ದೀರಿ ಎಂದರೆ ಸಾಕ್ಷಿಯು ಸ್ವಾಮೀಜಿ ಸಂಬಂದಪಟ್ಟಿದ್ದರಿಂದ ಹಾಕಿದ್ದೇನೆಂದು ನುಡಿಯುತ್ತಾರೆ. ನಿಪಿ28 ರಿಂದ 33 ರ ದಾಖಲಾತಿಗಳಲ್ಲಿ ಸ್ವಾಮೀಜಿ ಸನ್ಯಾಸ್ಯತ್ವ ತೆಗೆದುಕೊಂಡಿರುವ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸನ್ಯಾಸ್ಯತ್ವ ತೆಗೆದುಕೊಂಡಿದ್ದೇನೆಂದು ಬರೆದಿದ್ದಾರಾ ಅಥವಾ ಸ್ವಾಮೀಜಿ ಆಗಿದ್ದೇನೆಂದು ಬರೆದಿದ್ದಾರಾ ಎಂದರೆ ಸಾಕ್ಷಿಯು ಸನ್ಯಾಸ್ಯತ್ವ ಎಂದು ಬರೆದಿಲ್ಲ, ಸ್ವಾಮೀಜಿ ಎಂದು ಬರೆದಿದ್ದೇನೆಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸನ್ಯಾಸ್ಯತ್ವ ತೆಗೆದುಕೊಂಡಿದ್ದರಿಂದ ಸ್ವಾಮೀಜಿ ಎಂದು ಬರೆದಿದ್ದೇನೆಂದು ನುಡಿಯುತ್ತಾರೆ. ಯಾವಾಗ ಸ್ವಾಮೀಜಿ ಆಗಿದ್ದಾರೆಂದು ಬರೆದಿದ್ದಾರಾ ಎಂದರೆ ಸಾಕ್ಷಿಯು ಸ್ವಾಮಿಜಿ ಆಗಿದ್ದಾರೆಂದು ಬರೆದಿರುತ್ತಾರೆ ಆದರೆ ಯಾವಾಗ ಎಂದು ತಿಳಿದಿಲ್ಲ ನುಡಿಯುತ್ತಾರೆ.

2. ನಿಪಿ28, 32 ರ ದಾಖಲಾತಿಗಳಲ್ಲಿ ನನ್ನ ಮೇಲೆ ಸಹ ಆಪಾದನೆ ಇರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ನಿಪಿ29 ರಲ್ಲಿ ಆ ಕೇಸಿನ ವಾದಿ ಮೇಲೆ ಸಹ ಆಪಾದನೆ ಮಾಡಿರುತ್ತಾರೆಂದರೆ ಸಾಕ್ಷಿಯು ಸ್ವಾಮೀಜಿರವರು ಮಾಡಿರುತ್ತಾರೆಂದು ನುಡಿಯುತ್ತಾರೆ. ಎರಡು ಕೇಸುಗಳು ವಿಚಾರಣೆ ತೀರ್ಮಾನ ಆಗಿರುವುದಿಲ್ಲ ಎಂದರೆ ಸಾಕ್ಷಿಯು ರುಕ್ಮಣಿಯಮ್ಮ ರವರು ವಾಪಸ್ಸು ತೆಗೆದು ಕೊಂಡಿರುತ್ತಾರೆಂದು ನುಡಿಯುತ್ತಾರೆ.

3. ನಿಪಿ29 ಒಎಸ 215/2000 ರ ದಾವೆಯ ತಕರಾರಿನ ಪ್ಯಾರಾ 4 ರಲ್ಲಿ ಪ್ರತಿವಾದಿಯು ಜೀವನದಲ್ಲಿ ಬೇಸರವಾಗಿ ಸ್ವಾಮೀಜಿ ಆಗಿದ್ದಾರೆಂದು ನಮೂದು ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಕೌಟುಂಬಿಕ ಜೀವನದಲ್ಲಿ ಬೇಸರವಾಗಿ ಸ್ವಾಮೀಜಿ ಆಗಿದ್ದಾರೆಂದು ನುಡಿಯುತ್ತಾರೆ. ಈ ಕೇಸಿನ ಪ್ರತಿವಾದಿ ತಂದೆ ಮಗನನ್ನು ಓದಿಸಿದ್ದ ಬಗ್ಗೆ ಮನೆಯನ್ನು ಖರೀದಿ ಮಾಡಿರುವ ಮತ್ತು ಮಗನಿಗೆ ಮದುವೆ ಮಾಡಿರಮ ಬಗ್ಗೆ ಎಲ್ಲಾ ವಿಷಯಗಳು ಇವೆ ಎಂದರೆ ಸಾಕ್ಷಿಯು ಇದೆ ಸ್ವಾಮೀಜಿ ರವರೇ ದಾಖಲೆಯಲ್ಲಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ನಿಪಿ29 ರ ಪ್ಯಾರಾ 12 ರಲ್ಲಿ ಮಥರ್ ತೆರೆಸಾ ಶಾಲೆಯನ್ನು ತೆರೆದ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಲವಾರು ಆಸ್ತಿಗಳನ್ನು ಖರೀದಿ ಮಾಡಿ ಅವರ ಹೆಂಡತಿ ಮಗನ ಹೆಸರಿಗೆ ಮಾಡಿರುತ್ತಾರೆಂದು ನಮೂದು ಮಾಡಿರುತ್ತಾರೆಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡು ನಂತರ ಮುಂದುವರೆದು ಕಮ್ಮಸಂದ್ರ ಕೋಟಿ ಲಿಂಗೇಶ್ವರ ಸ್ವಾಮಿ ದೇವಾಲಯಕ್ಕೆ ಸಂಬಂದಪಟ್ಟ ಎಲ್ಲಾ ಆಸ್ತಿ ಅವರಿಗೂ ಏನೂ ಸಂಬಂಧ ಇಲ್ಲ ಎಂದು ಅವರ ಹೆಂಡತಿ ಮಕ್ಕಳು ಹೇಳಿ ದಿಃ06.03.2000 ರಲ್ಲಿ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸನ್ಯಾಸ್ಯತ್ವ ತೆಗೆದುಕೊಂಡು ಜೀವನ ಮಾಡುತ್ತಿರುವ ಬಗ್ಗೆ ನಿಪಿ28 ರಿಂದ 33 ರ ದಾಖಲಾತಿಯಲ್ಲಿ ಎಲ್ಲಿ ಯೂ ನಮೂದು ಇಲ್ಲ ಎಂದರೆ ಸಾಕ್ಷಿಯು ಸನ್ಯಾಸ್ಯತ್ಮ ತೆಗೆದುಕೊಂಡು ಸ್ವಾಮೀಜಿ ಆಗಿದ್ದರೆಂದು ನುಡಿಯುತ್ತಾರೆ. ನಾನು ಪ್ರತಿವಾದಿಯ ತಂದೆಯ ಜೀವನದಲ್ಲಿ ಬಂದು ಪ್ರತಿವಾದಿತಾಯಿ ರುಕ್ಮಣಿಯಮ್ಮ ರವರಿಗೆ ಬೇಜಾರು ಆಗಿರುವ ಕಾರಣ ಈ ರೀತಿ ಕೇಸುಗಳನ್ನು ರುಕ್ಮಣಿಯಮ್ಮ ರವರು ಸಲ್ಲಿಸಿದ್ದಾರೆಂದರೆ ಸರಿಯಲ್ಲ. ನಂತರ ರುಕ್ಮಣಿಯಮ್ಮ ರವರನ್ನು ಸಮಾಧಾನ ಪಡಿಸಿದ ನಂತರ ಕೇಸುಗಳನ್ನು ವಾಪಸ್ಸು ಪಡೆದಿರುತ್ತಾರೆಂದರೆ ಸರಿಯಲ್ಲ.

4. ನಿಪಿ28 ರಿಂದ 33 ರಲ್ಲಿ ದೇವಸ್ಥಾನಕ್ಕೆ ಏನು ವರಮಾನ ಬರುತ್ತಿತ್ತು ಮತ್ತು ಯಾವ ರೀತಿ ಅದನ್ನು ಸಂರಕ್ಷಣೆ ಮಾಡುತ್ತಿದ್ದರು ಎನ್ನುವ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿಯ ಸ್ವಾಮೀಜಿ ರವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ34 ರ ಪ್ರತ್ಯುತ್ತರ ನೊಟೀಸ್ ರಲ್ಲಿ ಶ್ರೀ ಭೂ ಕೈಲಾಸ ಶ್ರೀ ವಾಲ್ಮೀಕಿ ಆಶ್ರಮ ಕೋಟಿಲಿಂಗ ಟೆಂಪಲ್ ಟ್ರಸ್ಟ ಅಸ್ತಿತ್ವದಲ್ಲಿ ಇಲ್ಲ ಎಂದು ಬರೆದಿದ್ದು, ಸದರಿ ಟ್ರಸ್ಟ ಅನ್ನು ದೇವಸ್ಥಾನವನ್ನು ನಿರ್ವಹಣೆ ಮಾಡುವ ಉದ್ದೇಶದಿಂದ ಮಾಡಿರುವುದು ಎಂದರೆ ಸಾಕ್ಷಿಯು ಹೌದು ಮಾಡಿದ್ದರು, ಆದರೆ ಆದಾದ ಮೊದಲನೇ ದಿನದಿಂದಲೂ ಡಿಪಂಡ್ ಟ್ರಸ್ಟ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಟ್ರಸ್ಟ ನಲ್ಲಿ ಪ್ರತಿವಾದಿ ಅವರ ತಂದೆ, ತಾಯಿ, ತಂಗಿ ಹಾಗೂ ನಾನೂ ಸಹ ಸದಸ್ಯರಾಗಿದ್ದೆವು ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ಟ್ರಸ್ಟ ಅನ್ನು ಮುಚ್ಚಿರುವ ಬಗ್ಗೆ ಏನಾದರೂ ದಾಖಲೆಗಳು ಆಗಿದೆಯಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿದು ನಂತರ ಮುಂದುವರೆದು ಸ್ವಾಮಿಜಿರವರು ಮೊದಲನೇ ದಿನದಿಂದಲೇ ಅದನ್ನು ಡೀಪಂಡ್ ಟ್ರಸ್ಟ ಎಂದು ಹೇಳಿದ್ದರೆಂದು ನುಡಿಯುತ್ತಾರೆ. ಡೀಪಂಡ್ ಟ್ರಸ್ಟ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ನಿಪಿ34 ರಲ್ಲಿ ಸನ್ಯಾಸ್ಯತ್ವ ಪಡೆದ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿಯು ಸನ್ಯಾಸ್ಯತ್ವ ತೆಗೆದುಕೊಂಡಿದ್ದರಿಂದ ಸ್ವಾಮಿಜಿ ಆಗಿರುತ್ತಾರೆಂದು ನುಡಿಯುತ್ತಾರೆ. ನಿಪಿ28 ರಿಂದ 34 ರ ದಾಖಲಾತಿಗಳು ಈ ಕೇಸಿಗೆ ಸಂಬಂಧ ಪಡದೇ ಇದ್ದರೂ ತಂದು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ**

**(ಅಶ್ವಿನಿ. ವಿ)**
**1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ ಎಂ ಎಫ್ ಸಿ, ಕೆ ಜಿ ಎಫ್**